ಆ) ರೂ. 160.50 ಕೋಟಿಗಳು.

ಇ) **ಆಯವ್ಯಯದಲ್ಲಿ ಒದಗಿಸಿದ ಹಣ :**

1)	1991-92	ಇಲ್ಲ.	
2)	1992-93	ಸಹಾಯಧನ	49.50 ಕೋಟಿ
3)	1993-94	ಸಹಾಯಧನ	48.50 ಕೋಟಿ
4)	1993-94	ಸಾಲ	93.05 ಕೋಟಿ.

ಬಿಡುಗಡೆ ಮಾಡಿದ ಹಣ :

1) ಗೃಹ ಮಂಡಲಿ.

(ಸಹಾಯ	1991-92	15,00 ಕೋಟಿ
ಧನ)	1992-93	15.00 ಕೋಟಿ
(ಸಾಲ)	1992-93	13.00 ಕೋಟಿ
	1993-94	-
		ಒಟ್ಟು 43.00 ಕೋಟಿ
		ಕಡಿತ 4.40 ಕೋಟಿ

(ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿರುವ 13.20 ಕೋಟಿಯಲ್ಲಿ ಸೇರಿದೆ) 38.60 ಕೋಟಿ.

2) ಜಿಲ್ಲಾಧಿಕಾರಿಗಳಿಗೆ

1992-93	13.20 ಕೋಟಿ.
1993-94	20.67 ಕೋಟಿ.
	ಒಟ್ಟು 33.87 ಕೋಟಿ.

ಇದುವರೆಗೂ ಬಿಡುಗಡೆಯಾಗಿರುವ ಒಟ್ಟು ಮೊತ್ತ **72.47 ಕೋಟಿ.**

ನಿಪ್ಪಾಣಿ ನಗರದಲ್ಲಿ ಹುಡ್ಕೋಸ್ಕೀಂನಲ್ಲಿ ಕಟ್ಟಿರುವ ಮನೆಗಳ ಬಗ್ಗೆ.

502 - ಶ್ರೀ ಸುಭಾಷ್ ಜೋಷಿ, (ನಿಪ್ಪಾಣಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಿಪ್ಪಾಣಿ ನಗರದಲ್ಲಿ ಹುಡ್ಕೋ ಸ್ಕೀಂನಲ್ಲಿ ಕಟ್ಟಿರುವ ಮನೆಗಳೆಷ್ಟು?

ಆ) ಸಾರ್ವಜನಿಕರಿಗಾಗಿ ಹಂಚಿರುವ ಮನೆಗಳ ಸಂಖ್ಯೆ ಎಷ್ಟು?

ಇ) ಈ ಮನೆಗಳ ಹಂಚಿಕೆಯಲ್ಲಿ ಅವ್ಯವಹಾರಗಳು ಏನಾದರೂ ನಡೆದಿವೆಯೇ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) 121.

ಆ) 121.

ಇ) ಇಲ್ಲ.

ಅಂಗಡಿ ಮತ್ತು ಮಳಿಗೆ ಲೈಸನ್ಸುಗಳನ್ನು 5 ವರ್ಷಗಳಿಗೆ ಒಮ್ಮೆ ನವೀಕರಣ.

477 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅಂಗಡಿಗಳು ಮತ್ತು ಮಳಿಗೆ ಕಾನೂನಿನನ್ವಯ ಎಷ್ಟು ಅಂಗಡಿಗಳು ಹಾಗೂ ಮಳಿಗೆಗಳನ್ನು ದಾಖಲಾತಿ ಮಾಡಿಕೊಳ್ಳಲಾಗಿದೆ;

ಅ) ಈ ಅಂಗಡಿಗಳು ಹಾಗೂ ಮಳಿಗೆಗಳ ಮಾಲೀಕರು ಪ್ರತಿವರ್ಷ ಲೈಸನಸ್ಸು ಸವೀಕರಿಸಬೇಕಾಗುವುದು ನಿಜವಲ್ಲವೇ.

ಇ) ಹಾಗಿದ್ದಲ್ಲಿ ಅಂಗಡಿ ಮಾಲೀಕರಿಗೆ ಕಿರುಕುಳ ಹಾಗೂ ಈ ಪದ್ಧತಿ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ದಿಸೆಯಲ್ಲಿ ಐದು ವರ್ಷಗಳಿಗೊಮ್ಮೆ ಅಂಗಡಿ ಹಾಗೂ ಮಳಿಗೆಗಳ ಲೈಸನ್ಸ್‌ಗಳನ್ನು ನವೀಕರಿಸುವ ಪದ್ಧತಿಯನ್ನು ಸರ್ಕಾರ ಜಾರಿಗೊಳಿಸಲಾಗುವುದೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಕಾರ್ಮಿಕ ಸಚಿವರು) :

ಅ) 1992ನೇ ಸಾಲಿನ ಅಂತ್ಯಕ್ಕೆ 1,62,330 ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ನೊಂದಾಯಿಸಲ್ಪಟ್ಟಿವೆ.

ಆ) ಹೌದು.

ಇ) ಇಲ್ಲ.

ಈ) ಇಲ್ಲ.

ಮಲೆನಾಡು ತಾಲ್ಲೂಕುಗಳಲ್ಲಿ ಕಟ್ಟುವ ಆಶ್ರಯ ಯೋಜನೆ. ಮನೆಗಳಿಗೆ ಹಣ ಹೆಚ್ಚು ಮಾಡುವ ಬಗ್ಗೆ.

346 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಲೆನಾಡು ತಾಲ್ಲೂಕುಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ 15,000 ರೂ.ಗಳಲ್ಲಿ ಗಟ್ಟಿಯಾದ ಮನೆ ಕಟ್ಟಲು ಸಾಧ್ಯವಾಗುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಉದಾ: ಮೂಡಿಗೆರೆ ತಾಲ್ಲೂಕು).

ಆ) ಹಾಗಿದ್ದಲ್ಲಿ ಗಟ್ಟಿಯಾದ ಮನೆ ಕಟ್ಟಲು ರೂ. 15,000 ರಿಂದ 20,000 ರೂ. ಗಳಿಗೆ ಹೆಚ್ಚಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ? ಶ್ರೀ ಗೋಪಿನಾಥ್ ಆರ್. ಸಾಂದ್ರ (ವಸತಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ವತಿಯಿಂದ 2500 ಮೂಲೆ ನಿವೇಶಗಳನ್ನು ಹರಾಜು.

231 - ಶ್ರೀ ಆರ್. ದಯಾನಂದರಾವ್ (ಗಾಂಧಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಗೃಹ ಮಂಡಲಿಯು 2500 ಮೂಲೆ ನಿವೇಶನಗಳನ್ನು ಹರಾಜು ಮಾಡಲು ನಿರ್ಧರಿಸಿದೆಯೇ?

ಆ) ಹಾಗಿದ್ದಲ್ಲಿ, ಬೆಂಗಳೂರು ನಗರದಲ್ಲಿ ಎಷ್ಟು ಮೂಲೆ ನಿವೇಶನಗಳನ್ನು ಹರಾಜು ಮಾಡಲಾಗುವುದು?

ಇ) ಈ ರೀತಿ ಮೂಲೆ ನಿವೇಶನಗಳನ್ನು ಹರಾಜು ಮಾಡುವ ಉದ್ದೇಶವೇನು?

ಶ್ರೀ ಗೋಪಿನಾಥ್ ಆರ್. ಸಾಂದ್ರ (ವಸತಿ ಸಚಿವರು) :

ಅ) ಕರ್ನಾಟಕ ಗೃಹ ಮಂಡಳಿಯಲ್ಲಿ ಇಲ್ಲಿಯವರೆಗೆ ಗುರುತಿಸಲಾದ ಎಲ್ಲಾ ಖಾಲಿ ಮೂಲೆ ನಿವೇಶನಗಳನ್ನು ಹರಾಜು ಮಾಡಲು ನಿರ್ಧರಿಸಲಾಗಿದೆ.